# DECREE
## IN THE COURT OF THE SENIOR CIVIL JUDGE AT BELUR
**: O.S No. 1/2018 :**

ವಾದಿಃ

ಬಿ.ಆರ್. ಮಲ್ಲಿಕಾರ್ಜುನ ಃಬಿನ್ಃ ರಾಮಕೃಷ್ಣಯ್ಯ, 46 ವರ್ಷ, ದೇವಸ್ಥಾನದ ರಸ್ತೆ, ಕೋಟೆ, ಬೇಲೂರು ಟೌನ್, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ,

(ಪ್ರಾಜ್ಞ ನ್ಯಾಯವಾದಿ ಶ್ರೀ ಕೆ.ಎಲ್. ನಟರಾಜು ರವರ ಮೂಲಕ ಪ್ರತಿನಿಧಿಸಿಲ್ಪಟ್ಟಿದ್ದಾರೆ)

ವಿರುದ್ಧ

ಪ್ರತಿವಾದಿಯರುಃ

1. ಜವರಮ್ಮ ಃಕೋಂಃ ಲೇಟ್ ಪುಪ್ಪಯ್ಯ, 60 ವರ್ಷ,
2. ಧರ್ಮರಾಜು ಃಬಿನ್ಃ ಲೇಟ್ ಪುಪ್ಪಯ್ಯ, 30 ವರ್ಷ,
3. ಯಶೋಧ ಃಬಿನ್ಃ ಲೇಟ್ ಪುಪ್ಪಯ್ಯ, 28 ವರ್ಷ, ಎಲ್ಲರೂ ಕೂಡ್ಲೂರು ಗ್ರಾಮ, ಯಮಸಂಧಿ ಅಂಚೆ, ಕಸಬಾ ಹೋಬಳಿ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ,

(ಪ್ರತಿವಾದಿಯರು ಗೈರುಹಾಜರಿದ್ದು, ಏಕಪಕ್ಷೀಯರಾಗಿರುತ್ತಾರೆ)

Suit Filed on **02-01-2018**

ಪ್ರಾರ್ಥನೆಃ

ಎ) ಮೇಲ್ಕಂಡ ಎಲ್ಲಾ ಕಾರಣಗಳಿಗಾಗಿ ಘನ ನ್ಯಾಯಾಲಯದವರು ಕೃಪೆ ಮಾಡಿ ಪ್ರತಿವಾದಿಯರು ವಾದಿಗೆ ಬೇಲೂರು ಉಪನೊಂಧಣಾಧಿಕಾರಿಗಳ ಕಛೇರಿಯ ಒಂದನೇ ಪುಸ್ತಕದ ದಸ್ತಾವೇಜು ನಂ.ಬಿಎಲ್‌ಯು-1-00231/2016-17 ಆಗಿ ಸಿಡಿ ನಂ.ಬಿಎಲ್‌ಯುಡಿ- 130 ನೇ ದ್ದರಲ್ಲಿ ದಿನಾಂಕ 20-04-2016 ರಂದು ಬರೆದು ಕೊಟ್ಟಿರುವ ನೊಂದಾಯಿತ ಕ್ರಯ ಒಪ್ಪಂದ ಕರಾರನ್ನು ಅನುಸರಿಸಿ ವಾದಿಗೆ ಪ್ರತಿವಾದಿಯರು ವಾದಿಯ ಖರ್ಚಿನಲ್ಲಿ ಅನುಸೂಚಿ ಸ್ವತ್ತಿನ ಬಾಬ್ತು ಕ್ರಯ ಪತ್ರವನ್ನು ಬರೆಸಿ ನೊಂದಾಯಿಸಿಕೊಡುವಂತೆ ಆದೇಶಿಸಬೇಕಾಗಿಯೂ ಹಾಗೂ ಸ್ವತ್ತಿನಾ ಸ್ವಾಧೀನ ವಹಿಸುವಂತೆಯೂ ಹಾಗೂ ಪ್ರತಿವಾದಿಯು ತಪ್ಪಿದ್ದಲ್ಲಿ ಘನ ನ್ಯಾಯಾಲಯವೇ ತಮ್ಮ ಏಜಂಟರ ಮೂಲಕ ಕ್ರಯ ಪತ್ರ ಬರೆಯಿಸಿ ನೊಂದಾಯಿಸಿ ಕೊಡುವಂತೆಯೂ ಹಾಗೂ

ಬಿ) ಒಂದು ವೇಳೆ ನಿರ್ಧಿಷ್ಟ ಪರಿಹಾರವನ್ನು ಮಂಜೂರು ಮಾಡಲು ಯಾವುದೇ ಕಾನೂನಿನ ಅಡಚಣೆಗಳುಂಟಾದಲ್ಲಿ ಪ್ರತಿವಾದಿಯಿಂದ ವಾದಿಯ ಅಸಲು ಹಣವಾದ 2,00,000-00 ರೂ.ಗಳನ್ನು ಹಾಗೂ ಅದಕ್ಕೆ ತಹಲ್ ವರೆಗೆ 18 % ರಂತೆ ಬಡಿಯನ್ನು ಹೊಂದುವಂತೆಯೂ ಹಾಗೂ

ಸಿ) ದಾವಾ ಖರ್ಚು ಮತ್ತು ದಾವಾ ನಡೆಯುವ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಸೂಕ್ತವೆಂದು ತೋರಿಬರುವ ಇತರೆ ಎಲ್ಲಾತರಹದ ತಾಜಾ ಪರಿಹಾರವನ್ನು ಪ್ರತಿವಾದಿಯಿಂದ ವಾದಿಯು ಹೊಂದುವಂತೆ ದಾವಾವನ್ನು ತೀರ್ಪು ಮತ್ತು ಡಿಕ್ರಿ ಮಾಡಬೇಕಾಗಿರುವುದು ನ್ಯಾಯಾಭಿವೃದ್ದಿ ದೃಷ್ಟಿಯಿಂದ ಅತ್ಯಾವಶ್ಯಕವೆಂದು ಪ್ರಾರ್ಥನೆ.

This suit coming on this day for final disposal before Sri.Shashidhara.M.Gowda., M.A., B.Ed., L.L.B.,. Senior Civil Judge & MFC.,Belur in the presence of Sri. K.L Nataraj, Advocate for Plaintiff and Defendants are placed Exparte.

**After pronouncing judgement it is ordered and decreed as follows.**

ವಾದಿಯ ದಾವವನ್ನು ಖರ್ಚು ಸಹಿತ ಪುರಸ್ಕರಿಸಲಾಗಿದೆ.

ದಿನಾಂಕಃ 20-04-2016 ರಂದು ಪ್ರತಿವಾದಿಯರು ಹಾಗೂ ವಾದಿಯ ಮಧ್ಯೆ ಆದ ಸ್ವಾಧೀನರಹಿತ ಕ್ರಯದ ಕರಾರು ಪತ್ರಕ್ಕೆ ಸಂಬಂಧಿಸಿದಂತೆ, ಮುಂಗಡವಾಗಿ ರೂ. 2,00,000/- ಗಳ ಹಣ ಪಡೆದುಕೊಂಡಿರುತ್ತಾರೆ. ಇನ್ನುಳಿದ ಖರೀದಿ ಮೊತ್ತ ರೂ. 5,00,000/- ಗಳ ಹಣವನ್ನು ಪ್ರತಿವಾದಿಯರು ವಾದಿಯಿಂದ ಪಡೆದುಕೊಂಡು, ಶುದ್ದ ಕ್ರಯಪತ್ರವನ್ನು ವಾದಿಯ ಹೆಸರಿಗೆ ಉಪ ನೊಂದಣಾಧಿಕಾರಿಗಳ ಕಚೇರಿ, ಬೇಲೂರು ಇಲ್ಲಿ ನೊಂದಾಯಿಸಿಕೊಟ್ಟು, ದಾವಾ ಅನುಸೂಚಿ ಸ್ವತ್ತಿನ ಸ್ವಾಧೀನವನ್ನು ವಾದಿಗೆ ಹಸ್ತಾಂತರಿಸಲು ಆದೇಶ ಮಾಡಲಾಗಿದೆ.

ಒಂದು ವೇಳೆ ಪ್ರತಿವಾದಿಯರು ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಶುದ್ದ ಕ್ರಯಪತ್ರವನ್ನು ನೊಂದಾಯಿಸಿಕೊಡಲಿಕ್ಕೆ ಮತ್ತು ದಾವಾ ಅನುಸೂಚಿ ಸ್ವತ್ತಿನ ಸ್ವಾಧೀನವನ್ನು ಹಸ್ತಾಂತರಿಸಲಿಕ್ಕೆ ಮುಂದಾಗದೇ ಇರುವ ಸಂದರ್ಭದಲ್ಲಿ ವಾದಿಯು ಈ ನ್ಯಾಯಾಲಯದಲ್ಲಿ ಉಳಿದ ಖರೀದಿ ಮೊತ್ತ ರೂ. 5,00,000/- ಗಳನ್ನು ಠೇವಣಿ ಮಾಡಿದ ನಂತರ ನ್ಯಾಯಾಲಯದ ನಿಯೋಗಿ ಮೂಲಕ ಶುದ್ದ ಕ್ರಯ ಪತ್ರವನ್ನು ನೊಂದಾಯಿಸಿಕೊಂಡು ದಾವಾ ಅನುಸೂಚಿ ಸ್ವತ್ತಿನ ಸ್ವಾಧೀನವನ್ನು ಪಡೆಯಲಿಕ್ಕೆ ಆದೇಶಿಸಲಾಗಿದೆ.

Given under my hand and the seal of the Court on this the 27th Day of **February** -2019

Decree Signed on 08-03-2019

Senior Civil Judge
Belur.

Senior Civil Judge
Belur.

**MEMORANDUM OF COSTS**

| | Plaintiff | Defendant |
|---|---|---|
| Court fee on Suit | 45,375-00 | -- |
| Advocate fee | - | -- |
| Process fee | 66-00 | **--** |
| **Total** | **45,441-00** | **--** |

**ಃ ಅನುಸೂಚಿ ಸ್ವತ್ತು ಃ**

ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು, ಕಸಬಾ ಹೋಬಳಿ ಹೊನ್ನೇನಹಳ್ಳಿ ಕಾವಲು ಗ್ರಾಮದ ಸರ್ವೆ ನಂಃ-17 ರಲ್ಲಿ 4 ಎಕರೆ ಖುಷ್ಕಿ ಜಮೀನಿಗೆ ಚಕ್ಕುಬಂದಿ.

ಪೂರ್ವಕ್ಕೆ ಃ- ನಿಂಗಯ್ಯರವರ ಜಮೀನು
ಪಶ್ಚಿಮಕ್ಕೆ ಃ- ಸೋಮಮ್ಮರವರ ಜಮೀನು
ದಕ್ಷಿಣಕ್ಕೆ ಃ- ಸರ್ಕಾರಿ ರಸ್ತೆ
ಉತ್ತರಕ್ಕೆ ಃ- ಚಿಕ್ಕಮಗಳೂರಿನವರ ಸಿಲ್ವರ್ ತೋಟ

Senior Civil Judge
Belur.